ಎ-72-74

## ಕರ್ನಾಟಕ ವಿಧಾನ ಪರಿಷತ್ತು

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ರವರು ನಿಯಮ-72ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ.

ವಿಷಯ : ರಾಷ್ಟ್ರೀಯ ಹೆದ್ದಾರಿ ನಂ.4 ರಲ್ಲಿ ಬೆಂಗಳೂರಿನಿಂದ ಮುಂಬಯಿವರೆಗೆ ಆರು ಪಥದ ರಸ್ತೆ ಇರುತ್ತದೆ. ಅದರಲ್ಲಿ ಹುಬ್ಬಳ್ಳಿ – ಧಾರವಾಡ ಬೈಪಾಸ್ ರಸ್ತೆ ಏಕಪಥ ರಸ್ತೆ ಇರುವುದರಿಂದ ದಿನನಿತ್ಯ ಅಪಘಾತಗಳು ಸಂಭವಿಸುತ್ತವೆ. ಸ್ವಲ್ಪ ದಿನಗಳ ಹಿಂದೆ ಇಟ್ಟಿಗಟ್ಟಿಯಲ್ಲಿ 13 ಜನ ಮಹಿಳೆಯರು ಅಪಘಾತದಲ್ಲಿ ನಿಧನರಾದ ಸುದ್ದಿ ಇಡೀ ದೇಶದಲ್ಲಿ ಪ್ರಚಾರವಾಗಿರುತ್ತದೆ. ಹಾಗಾಗಿ ಅದನ್ನು ತಕ್ಷಣವೇ ಆರು ಪಥದ ರಸ್ತೆಯನ್ನಾಗಿ ಮಾರ್ಪಡಿಸುವ ಬಗ್ಗೆ ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರ ಗಮನ ಸೆಳೆಯಬಯಸುತ್ತೇನೆ.

********

### ಸರ್ಕಾರದ ಉತ್ತರ

ಹುಬ್ಬಳ್ಳಿ – ಧಾರವಾಡ ಬೈಪಾಸ್ ರಸ್ತೆ ರಾಷ್ಟ್ರಿಯ ಹೆದ್ದಾರಿ-4ರ ಕಿಮೀ 403.800 ರಿಂದ 433.280 ರವರೆಗೆ ಸುಮಾರು 30.00 ಕಿಮೀ ರಸ್ತೆ ನಿರ್ಮಾಣ ಮತ್ತು ಉಸ್ತುವಾರಿಯನ್ನು ಮೆ॥ ಭಾರತ ಫೋರ್ಜ್ ಪ್ರೈವೇಟ್ ಲಿಮಿಟೆಡ್, ಪುಣೆ ಹಾಗೂ ಮೆ॥ ನಂದಿ ಹೈವೆ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ಬಿ.ಓ.ಟಿ ಆಧಾರದ ಮೇಲೆ ಭಾರತ ಸರ್ಕಾರ, ರಾಜ್ಯ ಸರ್ಕಾರದಿಂದ 1998ರಂದು ವಹಿಸಿಕೊಡಲಾಗಿರುತ್ತದೆ. ಸದರಿ ರಾಷ್ಟ್ರಿಯ ಹೆದ್ದಾರಿ-4ರಲ್ಲಿ ಮೇಲಿನ ಚೈನೇಜ್‌ಗಳಲ್ಲಿ ಒಟ್ಟು 6 ಸಂಖ್ಯೆ ಟೋಲ್ ನಾಕಾಗಳು ಇರುತ್ತವೆ. ದಿನಾಂಕ: 06-05-1998 ರಿಂದ 05-05-2024ರವರೆಗೆ (26 ವರ್ಷಗಳಿಗೆ) ನಿರ್ಮಾಣ ಮತ್ತು ಉಸ್ತುವಾರಿಯ ಸಂಬಂಧ ಶುಲ್ಕ ವಸೂಲಿಗೆ ಅನುಮತಿ ನೀಡಿ ಕರಾರು ಏರ್ಪಟ್ಟಿರುತ್ತದೆ.

ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆಯನ್ನು ಷಟ್ಪಥ ರಸ್ತೆಯನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗೆ ಯೋಜನಾ ವರದಿ ತಯಾರಿಸಲು ಸಮಾಲೋಚಕರನ್ನು NHAI ವತಿಯಿಂದ ನೇಮಿಸಲಾಗಿದ್ದು, ವಿಸ್ತೃತ ಯೋಜನಾ ವರದಿ ತಯಾರಿಕಾ ಹಂತದಲ್ಲಿರುತ್ತದೆ. (ಸದರಿ ಭಾಗವು ಪ್ರಸ್ತುತ ರಾಷ್ಟ್ರೀಯ ಹೆದ್ದಾರಿ ವಿಭಾಗ, ಹುಬ್ಬಳ್ಳಿ ವ್ಯಾಪ್ತಿಯಲ್ಲಿರುತ್ತದೆ).

ಮುಂದುವರಿದು, ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆಯನ್ನು ಪ್ರಸ್ತುತ ನಿರ್ವಹಿಸುತ್ತಿರುವ ಗುತ್ತಿಗೆದಾರರ ಕರಾರಿನಂತೆ ಕಾಲಾವಧಿಯು 2024 ರಲ್ಲಿ ಮುಕ್ತಾಯವಾಗಲಿದ್ದು, ಅಲ್ಲಿಯವರೆಗೆ ಸುಂಕ ವಸೂಲಾತಿಗೆ ಯಾವುದೇ ಧಕ್ಕೆಯಾಗದಂತೆ ಸದರಿ ರಸ್ತೆಯನ್ನು ಮೇಲ್ದರ್ಜೆಗೇರಿಸಲು ಸದರಿಯವರು ಅಭಿಮತ ವ್ಯಕ್ತಪಡಿಸಿರುತ್ತಾರೆ ಹಾಗೂ ಈ ಕುರಿತು ಕೇಂದ್ರ, ರಾಜ್ಯ ಮತ್ತು ಗುತ್ತಿಗೆದಾರರ ಸಭೆ (Steering committee) ಕರೆದು, ಅಂತಿಮ ತೀರ್ಮಾನ ಕೈಗೊಳ್ಳಲು ಕೋರಿರುತ್ತಾರೆ. ಅದರಂತೆ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದು, Steering committee ಸೂಚಿಸುವ ಅಂತಿಮ ತೀರ್ಮಾನದಂತೆ ಹಾಗೂ ಕೇಂದ್ರ ಭೂಸಾರಿಗೆ ಮಂತ್ರಾಲಯದ ಅನುಮೋದನೆಯ ನಂತರ ಷಟ್ಪಥ ರಸ್ತೆಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿಗಳು
ಲೋಕೋಪಯೋಗಿ ಇಲಾಖೆ.

ಲೋಇ 32 ಸಿಎನ್‌ಹೆಚ್ 2021 (ಇ)